**<u>ದಿನಾಂಕಃ 16-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ಶ್ರೀ.ಸಿ.ಎಂ.ಕೆ. ವಕೀಲರಿಂದಃ-</u>**

ನಾನು ಬಿ.ಇ. ಸಿವಿಲ್ ವ್ಯಾಸಾಂಗ ಮಾಡಿರುತ್ತೇನೆ. ನಾನು ಪ್ರಸ್ತುತ ಎ.ಡಿ.ಎಲ.ಆರ್ ಚನ್ನಪಟ್ಟಣ ರವರ ಕಛೇರಿಯಲ್ಲಿ ತಾತ್ಕಾಲಿಕ ಪರವಾನಗಿ ಭೂಮಾಪಕನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ ಎಂದರೆ ಸರಿ . ತಮ್ಮ ತಂದೆಗೆ ವಾಹನ ಅಪಘಾತ ಮತ್ತು ಆರೋಗ್ಯದ ಸಮಸೆ ಇತ್ತೆಂದು ತೋರಿಸಲು ತಾವು ನ್ಯಾಯಾಲಯಕ್ಕೆ ಎನಾದರೂ ದಾಖಲೆಗಳನ್ನು ಹಾಜರು ಪಡಿಸಿದ್ದೀರ ಎಂದು ಹೇಳಿದರೆ ಇಲ್ಲ ಎಂದು ಹೇಳುತ್ತಾರೆ. ನಾನು ಭೂಮಾಪಕನಾಗಿ ಕೆಲಸ ಮಾಡುತ್ತಿದ್ದು, ನನ್ನ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ತಿಳಿದು ಸತ್ಯಾಂಶ ತಿರುಚಲು ನಾನು ಅವರಿಂದ ಜಿ.ಪಿ.ಎ. ಪಡೆದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದೆ ಸರಿಯಲ್ಲ. ಸಾಮಾನ್ಯವಾಗಿ ರಾಜ್ಯ ಹೆದ್ದಾರಿಯ ಮಧ್ಯ ಭಾಗದಿಂದ ಎಷ್ಟು ಮೀಟರ್ ಹಗಲ ರಸ್ತೆ ಇರುತ್ತದೆ ಎಂದರೆ ಈ ಬಗ್ಗೆ ನನಗೆ ನಿಖರವಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ. 199/1ರ ಆಸ್ತಿಯ ಪೂರ್ವ ದಿಕ್ಕಿಗಿರುವ ಕೆರೆಯ ಏರಿಯು ಎಷ್ಟು ಎತ್ತರ ಇದೆ ಎಂದರೆ ಸಾಕ್ಷಿ 15 ಅಡಿ ಇರಬಹುದು ಎನ್ನುತ್ತಾರೆ. ಏರಿಯಿಂದ ನಿಮ್ಮ ಜಮೀನಿಗೆ ನೇರವಾಗಿ ವಾಹನವನ್ನು ಇಳಿಸಲು ಆಗುವುದಿಲ್ಲ ಎಂದರೆ ಏರಿಯು ಅಷ್ಟು ಎತ್ತರ ಇದೆ ಎಂದರೆ ಸರಿ. ಸರ್ವೆ 199/1ರ ಜಮೀನಿನಲ್ಲಿ ತೆಂಗಿನ ಸಸಿಗಳನ್ನು ನೆಟ್ಟಿದ್ದೇವೆ ಎಂದರೆ ಸರಿ. ತೆಂಗಿನ ಮರಗಳಿಗೆ ಈಗ ಎಷ್ಟು ವಯಸ್ಸು ಇರಬಹುದು ಎಂದರೆ 40 ವರ್ಷ ಎನ್ನುತ್ತಾರೆ. ರಸ್ತೆಯ ಕಡೆಗೆ ಇರುವ ತೆಂಗಿನ ಸಾಲುಗಳಿಗೂ ಮತ್ತು ರಸ್ತೆಯ ಮಧ್ಯೆ ಭಾಗಕ್ಕೂ ಎಷ್ಟು ಅಂತರ ಇದೆ ಎಂದರೆ ಸಾಕ್ಷಿಯು 5 ಮೀಟರು ಇದೆ ಎಂದು ಹೇಳುತ್ತಾರೆ. ರಸ್ತೆಯ ಮದ್ಯೆ ಭಾಗದಿಂದ ರಸ್ತೆಯ ಕಡೆಗೆ ಇರುವ ತೆಂಗಿನ ಮರಗಳ ನಡುವೆ ಸುಮಾರು 17 ಮೀಟರು ಅಂತರವಿದೆ ಎಂದರೆ ಸರಿಯಲ್ಲ. ನಿ.ಡಿ.6 ದಾಖಲೆಯಲ್ಲಿ ರಸ್ತೆಯ ಮಧ್ಯ ಭಾಗದಲ್ಲಿ ತಮ್ಮ ಜಮೀನಿಗೆ ಎಷ್ಟು ಮೀಟರ್ ಅಂತರವಿದೆ ಎಂದು ನಮೂದಾಗಿಲ್ಲ ಎಂದರೆ ಸರಿ. ರಸ್ತೆಯ ಕಡೆಗೆ ಹದ್ದುಬಸ್ತು ಕಲ್ಲುಗಳು ಇವೆಯಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ವಾದಿ ಹಾಜರು ಮಾಡಿರುವ ನಿ.ಪಿ.13 ರಿಂದ 15 ಪೋಟೋಗಳನ್ನು ನೋಡಿ ರಸ್ತೆಯನ್ನು ಗುರುತಿಸಲು ಆಗುತ್ತದೆ ಎಂದರೆ ಸಾಕ್ಷಿಯು ಆಗುವುದಿಲ್ಲ ಎನ್ನುತ್ತಾರೆ. ವಾದಿಯರು ತಮ್ಮ ಜಮೀನಿಗೆ ಓಡಾಡುತ್ತಿರುವ ಜಾಗ ರಾಜ್ಯ ಹೆದ್ದಾರಿಯ ಮಧ್ಯ ಭಾಗದ 17 ಮೀಟರ್ ಒಳಗಡೆ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಎರಿಯ ಬುಡದಿಂದ ತಾವು ನೆಟ್ಟಿರುವ ತೆಂಗಿನ ಮರಕ್ಕೆ ಎಷ್ಟು ಅಂತರ ಇದೆ ಎಂದರೆ ಅಂತರ ಇಲ್ಲ ಎನ್ನುತ್ತಾರೆ. ಕೆರೆಯ ಎರಿಯ ಬುಡದಿಂದ ನಾವು ನೆಟ್ಟಿರುವ ತೆಂಗಿನ ಮರಗಳು ತೆಂಗಿನ ಮರದ ಸಾಲುಗಳು 4 ರಿಂದ 5 ಮೀಟರ್ ಅಂತರದಲ್ಲಿ ಇದೆ ಎಂದರೆ ಸರಿಯಲ್ಲ. ವಾದಿಯು ಸರ್ವೆ ನಂ. 199/1ರ ಆಸ್ತಿಯ ಮೇಲೆ ದಾವೆ ಮಾಡಿರುತ್ತಾರೋ ಅಥವಾ ರಾಜ್ಯ ಹೆದ್ದಾರಿಯ ಏರಿಯ ಕೆಳಭಾಗಕ್ಕೆ ದಾವೆ ಮಾಡಿರುತ್ತಾರೋ ಎಂದು ಕೇಳಲಾಗಿ ಸಾಕ್ಷಿ ಹೆದ್ದಾರಿಯ ಜಾಗಕ್ಕೆ ಎನ್ನುತ್ತಾರೆ. ಕೆರೆಯ ಏರಿ ಎಷ್ಟು ಹಗಲ ಇದೆ ಎಂದು ತಿಳಿದುಕೊಂಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ . ಕೆರೆಯ ಏರಿಯ ಮೇಲೆ ರಾಜ್ಯ ಹೆದ್ದಾರಿ ಚನ್ನಪಟ್ಟಣದಿಂದ ಹಲಗೂರು ಹೋಗುವ ರಸ್ತೆ ಇದೆ ಎಂದರೆ ಸರಿ. ಕೆರಯ ಏರಿ ಎಷ್ಟು ಹಗಲ ಇದೆಯೋ ಅಷ್ಟು ಹಲಗಕ್ಕೆ ಡಾಬರ್ ಹಾಕಿದ್ದು ಇನ್ನುಳಿದ ಅಕ್ಕಪಕ್ಕದ ಜಾಗ ಹಾಗೇ ಉಳಿದಿದೆ ಎಂದರೆ ಸರಿಯಲ್ಲ . ರಾಜ್ಯ ಹೆದ್ದಾರಿಯ ಜಾಗ ಉಳಿದಿದ್ದ ಆ ಜಾಗದಲ್ಲಿ ವಾದಿಗಳು ತಮ್ಮ ಸ್ವತ್ತಿಗೆ ಹೋಗಿ ಬರುತ್ತರೆ ಎಂದರೆ ಸರಿಯಲ್ಲ. ನಮಗೆ ಸೇರಿದ ಸರ್ವೆ ನಂ199/1ರ ಆಸ್ತಿಯ ದಕ್ಷಿಣ ಭಾಗಕ್ಕೆ ವಾದಿಯರ ಜಮೀನು ಇದೆ ಎಂದರೆ ಸರಿ. ವಾದಿಯರು ಪುರಾತನ ಕಾಲದಿಂದಲೂ ದಾವಾ ಸ್ವತ್ತಿನ ಜಾಗದಲ್ಲಿ ತಮ್ಮಗೆ ಸೇರಿದ ಸ್ವತ್ತಿಗೆ ಹೋಗಿ ಬರುತ್ತಿರುತ್ತಾರೆ ಎಂದರೆ

ಸರಿಯಲ್ಲ. ನಮಗೆ ಸೇರಿದ ಸರ್ವೆ ನಂ. 199/1ರ ಆಸ್ತಿಯ ವಿಸ್ತೀರ್ಣ 0.32.08 (ಮೂವತ್ತಾ ಎರಡುವರೆ ಗುಂಟೆ) ಎಂದರೆ ಸರಿ. ತಮ್ಮ ಆಸ್ತಿಯ ಪೂರ್ವ ದಿಕ್ಕಿಗೆ ಇರುವ ರಾಷ್ಟ್ರೀಯ ಹೆದ್ದಾರಿ ಎಷ್ಟು ಇದೆ ಎಂದು ದಾಖಲೆ ನೋಡಿ ತಿಳಿದುಕೊಂಡಿದ್ದೀರ ಎಂದರೆ ಸರಿ. 0.32.08 (ಮೂವತ್ತಾ ಎರಡುವರೆ ಗುಂಟೆ) ಬಿಟ್ಟು ಪೂರ್ವ ದಿಕ್ಕಿಗೆ ನಮಗೆ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ . ಅದೇರೀತಿ ಪೂರ್ವ ದಿಕ್ಕಿಗೆ ಯಾವುದೇ ಒತ್ತುವರಿ ಜಾಗ ಇಲ್ಲ ಎಂದರೆ ಸರಿ. ತಮಗೆ ಸೇರಿದ 0.32.08 (ಮೂವತ್ತಾ ಎರಡುವರೆ ಗುಂಟೆ) ಗುಂಟೆ ಜಾಗವನ್ನು ಹದ್ದುಬಸ್ತು ಮಾಡಿಸಿ ಉಳಿದ ರಾಷ್ಟ್ರೀಯ ಹೆದ್ದಾರಿಯ ಜಾಗದ ಪಕ್ಕದಲ್ಲಿ ಇರುವ ಜಾಗವನ್ನು ವಾದಿಯರು ತಮ್ಮ ಜಮೀನಿಗೆ ಬಳಸಿಕೊಳ್ಳಲು ನಮ್ಮದೇನು ಅಭ್ಯಂತರವಿಲ್ಲ ಎಂದರೆ ಸರಿ. ಸರ್ವೆ ನಂ. 199/1ರ ನಮಗೆ ಸೇರಿದ ಆಸ್ತಿಯನ್ನು ಇದುವರೆವಿಗೂ ಅದ್ದುಬಸ್ತು ಮಾಡಿಸಿಲ್ಲ ಎಂದರೆ ಸರಿ. ರಾಷ್ಟೀಯ ಹೆದ್ದಾರಿಗೆ ಸೇರಿದ ಜಾಗವನ್ನು ವಾದಿಯರು ರಸ್ತೆಗಾಗಿ ಬಳಸಿಕೂಂಡು ತಮ್ಮ ಜಮೀನಿಗೆ ಹೋಗಿ ಬರುತಾ ಇದ್ದು ಆ ಅಸ್ತಿಯನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ಅವರಿಗೆ ತೊಂದರೆ ಕೊಡಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 13 ರಿಂದ 15 ಪೋಟೋಗಳಲ್ಲಿ ವಾದಿಯರು ಬಳಸುತ್ತಿರುವ ರಸ್ತೆಯು ಸ್ಪಷ್ಟವಾಗಿ ಕಾಣಿಸುತ್ತಿದ್ದರು ನನಗೆ ಸರಿಯಾಗಿ ಕಾಣಿಸುತ್ತಿದ್ದರೂ, ನನಗೆ ಗೊತ್ತಾಗುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸರ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು, ಸರ್ವೆ ನಂ. 199/1 ರ ಜಮೀನನ್ನು ತಕ್ಷಣವೇ ತಾವು ಹದ್ದುಬಸ್ತು ಮಾಡಿ ನಿಖರವಾದ ವಿಸ್ತೀರ್ಣ ಕಂಡು ಕೊಳ್ಳಬಹುದಾಗಿದ್ದರೂ ಉದ್ದೇಶ ಪೂರ್ವಕವಾಗಿ ದಾವಾ ಆಸ್ತಿಯ ವಾದಿಯರು ಉಪಯೋಗಿಸುತ್ತಿರುವ ರಸ್ತೆಗೆ ಸಂಬಂಧಿಸಿದಂತೆ ತಮಗೆ ಅಡಚಣೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ